ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **843**
ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

*****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮನೆಗಳಿಗೆ ವಿಧಿಸುತ್ತಿರುವ ವಿದ್ಯುತ್ ಬಿಲ್ಲಿನಲ್ಲಿ ಇತರೆ ಎಂಬುದಾಗಿ ಶುಲ್ಕವನ್ನು ಸೇರಿಸಿ ವಿದ್ಯುತ್ ಬಿಲ್ಲುಗಳನ್ನು ಜನ ಸಾಮಾನ್ಯರಿಂದ ಕಟ್ಟಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಇತರೆ ಎಂದು ಕಟ್ಟಿಸಿಕೊಳ್ಳುತ್ತಿರುವ ಶುಲ್ಕ ಯಾವ ವಿಷಯಕ್ಕೆ ಸಂಬಂಧಿಸಿದೆ;	ಕೆ.ಇ.ಆರ್.ಸಿ. ಮತ್ತು ಕರ್ನಾಟಕ ಸರ್ಕಾರವು ಕಾಲ-ಕಾಲಕ್ಕೆ ನಿಗದಿಪಡಿಸಿದ ಶುಲ್ಕಗಳನ್ನು ಹೊರತುಪಡಿಸಿ ಇತರೆಯೆಂದು ಯಾವುದೇ ಶುಲ್ಕಗಳನ್ನು ಮಂಗಳೂರು, ಚಾಮುಂಡೇಶ್ವರಿ, ಹುಬ್ಬಳ್ಳಿ, ಕಲಬುರುಗಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಗ್ರಾಹಕರಿಂದ ಪಾವತಿಸಿಕೊಳ್ಳುತ್ತಿರುವುದಿಲ್ಲ. ಬೆಸ್ಕಾಂ ವ್ಯಾಪ್ತಿಯಲ್ಲಿ, ಗ್ರಾಹಕರಿಗೆ ನೀಡಲಾಗುವ ವಿದ್ಯುತ್ ಬಿಲ್ಲಿನಲ್ಲಿ 'ಇತರೆ' ಎಂದು ಕಟ್ಟಿಸಿಕೊಳ್ಳುತ್ತಿರುವ ಶುಲ್ಕಗಳ ವಿವರಗಳು ಈ ಕೆಳಗಿನಂತಿವೆ. 1. ಮರು ಸಂಪರ್ಕ ಶುಲ್ಕ (Disconnection & Re-connection charges) ಶುಲ್ಕ. 2. ಬ್ಯಾಂಕ್ ಶುಲ್ಕ (Cheque Dishonour) 3. ಕಂದಾಯ ವ್ಯತ್ಯಾಸದ ಶುಲ್ಕ (Short Claim) 4. ಮಾಪಕ ಸುಟ್ಟು ಹೋದ ವೆಚ್ಚ (Meter burnt charges)
ಆ)	ಇತರೆ ಎಂಬುದಾಗಿ ವಿದ್ಯುತ್ ಬಿಲ್ಲುಗಳಿಂದ ಪ್ರತಿ ತಿಂಗಳು ವಿದ್ಯುತ್ ಕಂಪನಿಗಳು ಸಂಗ್ರಹಿಸುವ ಒಟ್ಟು ಮೊತ್ತ ಎಷ್ಟು;	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಇತರೆ ಎಂಬುದಾಗಿ ವಿದ್ಯುತ್ ಬಿಲ್ಲುಗಳಿಂದ ಪ್ರತಿ ತಿಂಗಳು ಸಂಗ್ರಹಿಸುವ ಒಟ್ಟು ಅಂದಾಜು ಮೊತ್ತ ರೂ.2.40 ಲಕ್ಷಗಳು.
ಇ)	ಕಳೆದ 5 ವರ್ಷಗಳಲ್ಲಿ ವಿದ್ಯುತ್ ಬಿಲ್ಲಿನಲ್ಲಿ ಇತರೆ ಎಂಬ ಅಂಶದ ಮೂಲಕ ಗ್ರಾಹಕರಿಂದ ಸಂಗ್ರಹಿಸಿದ ಒಟ್ಟು ಮೊತ್ತ ಎಷ್ಟು; ಈ ರೀತಿಯಾಗಿ ಇತರೆ ಹೆಸರಿನಲ್ಲಿ ಸಂಗ್ರಹಿಸಿದ ಮೊತ್ತವನ್ನು ಯಾವ ಯಾವ ರೀತಿಯಾಗಿ ವೆಚ್ಚ ಮಾಡಲಾಗುತ್ತದೆ; (ವಿವರ ನೀಡುವುದು)	ಕಳೆದ 5 ವರ್ಷದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಇತರೆ ಎಂಬ ಅಂಶದ ಮೂಲಕ ಲೆಕ್ಕೀಕರಿಸಿರುವ ಒಟ್ಟು ಮೊತ್ತ ರೂ. 1.49 ಕೋಟಿಗಳು. ಸಾಮಾನ್ಯವಾಗಿ ಸದರಿ ಮೊತ್ತವನ್ನು ಕಂದಾಯ ವೆಚ್ಚಗಳಿಗೆ ಪಾವತಿಸಲಾಗುತ್ತದೆ.
ಈ)	ವಿದ್ಯುತ್ ದರವನ್ನು ಯಾವ ಆಧಾರದಲ್ಲಿ ನಿಗದಿಪಡಿಸಲಾಗುತ್ತದೆ; ಒಂದು ಯೂನಿಟ್ಟಿಗೆ ಗ್ರಾಹಕರಿಗೆ ನಿಗದಿಪಡಿಸುವ ದರದಲ್ಲಿ ಉತ್ಪಾದನೆ, ಸಾಗಣೆ, ವೇತನ, ನಷ್ಟ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ದರ ನಿಗದಿ ಪಡಿಸಲಾಗುತ್ತದೆಯೇ?	ವಿದ್ಯುತ್ ದರವನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನಿಗದಿಪಡಿಸುತ್ತದೆ. ಪ್ರತಿ ವರ್ಷ, ಮುಂದಿನ ಹಣಕಾಸು ವರ್ಷದ ಪ್ರಾರಂಭದ 120 ದಿನಗಳ ಮೊದಲು ವಾರ್ಷಿಕ ಆಧಾರದ ಮೇಲೆ ದರ ಪರಿಷ್ಕರಣೆಗಾಗಿ ಮಾಹಿತಿಯನ್ನು ಆಯೋಗಕ್ಕೆ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸುತ್ತವೆ.

..2

		ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಲೆಕ್ಕ ಪರಿಶೋಧಿತ ಖಾತೆಗಳ ಆಧಾರದ ಮೇಲೆ ಟ್ರೂಯಿಂಗ್ ಅಪ್ ಅನ್ನು ಒದಗಿಸುವುದು ಶಾಸನಬದ್ಧ ಅವಶ್ಯಕತೆಯಾಗಿದೆ. ವಿದ್ಯುತ್ ಕಾಯ್ದೆ 2003 ರ ಸೆಕ್ಷನ್ 61 ಮತ್ತು 62 ಮತ್ತು ಕವಿನಿ ಆಯೋಗದ (ವಿದ್ಯುತ್ ವಿತರಣೆ ಮತ್ತು ಚಿಲ್ಲರೆ ಮಾರಾಟಕ್ಕಾಗಿ ದರವನ್ನು ನಿರ್ಧರಿಸುವ ನಿಯಮಗಳು ಮತ್ತು ಷರತ್ತುಗಳು) ಸೇರಿದಂತೆ ನಿಯಮಗಳು 2006 ಮತ್ತು ಎಂವೈಟಿ (ಬಹು ವರ್ಷದ ದರ) ಆದೇಶ ಸಂಖ್ಯೆ ಡಿ/01/6, ದಿನಾಂಕ 31.05.2006 ರ ಅಡಿಯಲ್ಲಿ ಜಕಾತಿ ಪರಿಷ್ಕರಣೆಯನ್ನು ಕೋರಲಾಗುವುದು. ಪ್ರತಿ ಯೂನಿಟ್ಟಿಗೆ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ಜಕಾತಿ ಪರಿಷ್ಕರಣೆಯನ್ನು ಕೋರಲಾಗುವುದು • ವಿದ್ಯುತ್ ಮಾರಾಟದ ಆದಾಯ • ದುರಸ್ತಿ ಮತ್ತು ನಿರ್ವಹಣಾ ವೆಚ್ಚ • ನೌಕರರ ವೆಚ್ಚ • ಆಡಳಿತಾತ್ಮಕ ಹಾಗೂ ಸಾಮಾನ್ಯ ವೆಚ್ಚ. • ಸವಕಳಿ ವೆಚ್ಚ • ಸಾಲದ ಮೇಲಿನ ಬಡ್ಡಿ ವೆಚ್ಚ • ಗ್ರಾಹಕರ ಠೇವಣಿಗಳ ಮೇಲಿನ ಬಡ್ಡಿ • ಕಾರ್ಯವಾಹಿ ಬಂಡವಾಳದ ಮೇಲಿನ ಬಡ್ಡಿ • ಇತರೆ ಆದಾಯ • ರಿಟರ್ನ್ ಆನ್ ಈಕ್ವಿಟಿ ಹಿಂದಿನ ಆರ್ಥಿಕ ವರ್ಷದಲ್ಲಿನ ಆದಾಯ ಹಾಗೂ ವೆಚ್ಚದಲ್ಲಿನ ವ್ಯತ್ಯಾಸ (ಕೊರತೆ/ಹೆಚ್ಚಳ)

ಸಂಖ್ಯೆ: ಎನರ್ಜಿ 223 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು.